## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 59 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು) |
| 3) | ಉತ್ತರಿಸಬೇಕಾದ ದಿನಾಂಕ | 19-12-2022 |
| 4) | ಉತ್ತರಿಸುವವರು | ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

### ಪ್ರಶ್ನೆ

(ಅ) ರಾಜ್ಯದಲ್ಲಿ ಉದ್ಯೋಗ ಸೃಷ್ಟಿಗೆ ಪೂರಕವಾದ ಕೌಶಲ್ಯ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಯೋಜನೆ, ಸರ್ಕಾರದ ಗುರಿ ಮತ್ತು ನಿಗಧಿತ ಸಾಧನೆಗಳಾವುವು; (ಸಂಪೂರ್ಣ ಮಾಹಿತಿಯನ್ನು ನೀಡುವುದು)

### ಉತ್ತರ

**ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೆ.ಎಸ್.ಡಿ.ಸಿ)**

ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮವು ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಪ್ರಧಾನ ಮಂತ್ರಿ ಕೌಶಲ್ಯ ವಿಕಾಸ ಯೋಜನೆ ಹಾಗೂ ಮುಖ್ಯಮಂತ್ರಿ ಕೌಶಲ್ಯ ಕರ್ನಾಟಕ ಯೋಜನೆಯನ್ನು ಜಾರಿಗೆ ತಂದಿದ್ದು, ರಾಜ್ಯದ ಯುವ ಜನತೆಗೆ ಈ ಎರಡೂ ಯೋಜನೆಗಳಡಿ ಅಲ್ಪಾವಧಿ ಕೌಶಲ್ಯಾಧಾರಿತ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಉದ್ಯೋಗ ಕಲ್ಪಿಸಲು ಕ್ರಮವಹಿಸಲಾಗುತ್ತಿದೆ. ಅದರಂತೆ ಮೇಲ್ಕಂಡ ಯೋಜನೆಗಳಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರವು ನಿಗಧಿಪಡಿಸಿರುವ ಮಾರ್ಗಸೂಚಿಯನ್ವಯ ನೋಂದಣಿಗೊಂಡ ಸರ್ಕಾರಿ/ಸರ್ಕಾರೇತರ ತರಬೇತಿ ಸಂಸ್ಥೆಗಳ ಮೂಲಕ ಕೌಶಲ್ಯಾಧಾರಿತ ತರಬೇತಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ.

**ಮುಖ್ಯಮಂತ್ರಿ ಕೌಶಲ್ಯ ಕರ್ನಾಟಕ ಯೋಜನೆ**

| ಕ್ರಸಂ | ಆರ್ಥಿಕ ವರ್ಷ | ಆರ್ಥಿಕ | | ಭೌತಿಕ | |
|---|---|---|---|---|---|
| | | ಗುರಿ | ಸಾಧನೆ | ಗುರಿ | ಸಾಧನೆ |
| 1 | 2020-2021 | 7614.54 | 7427.18 | 26134 | 25077 |
| 2 | 2021-22 | 8514.55 | 8281.83 | 38460 | 43397 |

**ಪ್ರಧಾನಮಂತ್ರಿ ಕೌಶಲ್ಯ ವಿಕಾಸ ಯೋಜನೆ**

| ಕ್ರಸಂ | ಆರ್ಥಿಕ ವರ್ಷ | ಆರ್ಥಿಕ | | ಭೌತಿಕ | |
|---|---|---|---|---|---|
| | | ಗುರಿ | ಸಾಧನೆ | ಗುರಿ | ಸಾಧನೆ |
| 1 | 2020-2021 | 783.75 | 783.72 | 17147 | 5672 |
| 2 | 2021-22 | 827.89 | 827.89 | 21000 | 17061 |

**ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ (ಡೇ-ನಲ್ಮ್)**

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಡೇ-ಎನ್‌ಯುಎಲ್‌ಎಂ ಅಭಿಯಾನದಡಿ ಕೌಶಲ್ಯಾಭಿವೃದ್ಧಿಗೆ ಸಂಬಂಧಿಸಿದಂತೆ ಕಾರ್ಯಕ್ರಮಗಳು ಈ ಕೆಳಕಂಡಂತೆ ಇರುತ್ತವೆ.

**1. ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳನಿಯುಕ್ತಿ:-**

ಸದರಿ ಉಪಘಟಕದಡಿ ನಗರದ ನಿರುದ್ಯೋಗ ಯುವಕ/ಯುವತಿಯರಿಗೆ ವಿವಿಧ ಉದ್ಯೋಗಾಧಾರಿತ ಕೌಶಲ್ಯ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗುತ್ತಿರುತ್ತದೆ. ಹಾಗೂ ತರಬೇತಿ ಕಾರ್ಯಕ್ರಮಗಳು ಮುಕ್ತಾಯಗೊಂಡ ನಂತರ ಶೇ.70 ರಷ್ಟು ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ಮತ್ತು ವೇತನಾಧಾರಿತ ಉದ್ಯೋಗವನ್ನು ಕಲ್ಪಿಸಲಾಗುವುದು.

ಸದರಿ ಉಪಘಟಕದಡಿ ಕಳೆದ 3 ವರ್ಷಗಳ ಗುರಿ ಮತ್ತು ಸಾಧನೆಯ ವಿವರ ಈ ಕೆಳಕಂಡಂತಿರುತ್ತದೆ.

| ಕ್ರಸಂ | ವರ್ಷ | ಗುರಿ | ಸಾಧನೆ |
|---|---|---|---|
| 1 | 2019–20 | 24520 | 5409 |
| 2 | 2020–21 | 7500 | 6655 |
| 3 | 2021–22 | 0 | 13133 |

2. ಸ್ವಯಂ ಉದ್ಯೋಗ ಕಾರ್ಯಕ್ರಮ:–

ಸದರಿ ಉಪಘಟಕದಡಿ ವೈಯಕ್ತಿಕ ಕಿರು ಉದ್ದಿಮೆಯನ್ನು ಪ್ರಾರಂಭಿಸಲು ರೂ.2.00 ಲಕ್ಷ ಹಾಗೂ ಗುಂಪು ಕಿರು ಉದ್ದಿಮೆಯನ್ನು ಪ್ರಾರಂಭಿಸಲು ರೂ.10.00 ಲಕ್ಷದವರೆಗೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಕಲ್ಪಿಸಲಾಗುವುದು ಹಾಗೂ ಬ್ಯಾಂಕಿನಿಂದ ಸಾಲ ಮಂಜೂರಾತಿಯಾದ ಫಲಾನುಭವಿಗಳಿಗೆ ಉದ್ಯಮಶೀಲತಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ನೀಡಲಾಗುತ್ತದೆ.

ಸದರಿ ಉಪಘಟಕದಡಿ ಕಳೆದ 3 ವರ್ಷಗಳ ಗುರಿ ಮತ್ತು ಸಾಧನೆಯ ವಿವರ ಈ ಕೆಳಕಂಡಂತಿರುತ್ತದೆ.

| ಕ್ರಸಂ | ವರ್ಷ | ಗುರಿ | ಸಾಧನೆ |
|---|---|---|---|
| 1 | 2019–20 | 16700 | 4921 |
| 2 | 2020–21 | 19500 | 4663 |
| 3 | 2021–22 | 16264 | 11787 |

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಎನ್.ಆರ್.ಎಲ್.ಎಂ)

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಂಜೀವಿನಿ–ಕೆಎಸ್ಆರ್ಎಲ್ಪಿಎಸ್ ಮೂಲಕ ಪ್ರಮುಖವಾಗಿ ಗ್ರಾಮೀಣ ಮಹಿಳಾ ಬಡತನ ರೇಖೆಯ ಮಹಿಳೆಯರನ್ನು ಸ್ವ–ಸಹಾಯ ಗುಂಪಿನಡಿ ಸಂಘಟಿಸುವ ಮೂಲಕ ಜೀವನೋಪಾಯ ಸ್ವ ಉದ್ಯೋಗಗಳನ್ನು ಕಲ್ಪಿಸುವ ಗುರಿ ಮತ್ತು ಉದ್ದೇಶದಿಂದ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನವನ್ನು ರಾಜ್ಯದ 226 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಗ್ರಾಮೀಣ ಭಾಗದ ಎಲ್ಲಾ ಬಡಕುಟುಂಬದಿಂದ ಓರ್ವ ಮಹಿಳೆಯನ್ನು ಸ್ವಸಹಾಯ ಗುಂಪಿಗೆ ಸೇರಿಸಲು ಕ್ರಮವಹಿಸಲಾಗಿದೆ. ಯೋಜನೆಯ ಪ್ರಮುಖ ಚಟುವಟಿಕೆಯೆಂದರೆ ಹೊಸ ಸ್ವ–ಸಹಾಯ ಗುಂಪುಗಳ ರಚನೆ, ಸ್ವ–ಸಹಾಯ ಗುಂಪುಗಳ ಬಲವರ್ಧನೆ ಹಾಗೂ ವಾರ್ಡ್ ಮತ್ತು ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳನ್ನು ರಚಿಸುವ ಮೂಲಕ ಅವರಿಗೆ ಜೀವನೋಪಾಯ ಉದ್ಯೋಗಗಳನ್ನು ಕಲ್ಪಿಸುವುದಾಗಿರುತ್ತದೆ. ರಾಜ್ಯದಲ್ಲಿ 2948498 ಮಹಿಳೆಯರನ್ನು 245185 ಗುಂಪುಗಳಡಿ ಸಂಘಟಿಸಲಾಗಿದೆ.

ಸ್ವಸಹಾಯ ಗುಂಪುಗಳಿಗೆ ಪಂಚಸೂತ್ರಗಳ ಪಾಲನೆ, ಬ್ಯಾಂಕ್ ಸಂಪರ್ಕ, ಜೀವನೋಪಾಯ ಚಟುವಟಿಕೆಗಳು, ವಾರ್ಷಿಕ ಲೆಕ್ಕ ಪರಿಶೋಧನೆ ಇನ್ನೂ ಮುಂತಾದ ತರಬೇತಿಗಳನ್ನು ನೀಡುವುದರ ಮೂಲಕ ಗುಂಪುಗಳನ್ನು ಸುಸ್ಥಿರವಾಗಿಸಲು ಕ್ಷೇತ್ರ ಮಟ್ಟದಲ್ಲಿ ಸಮುದಾಯ ಸಂಪನ್ಮೂಲ ವ್ಯಕ್ತಿಗಳ ಮೂಲಕ ನಿರಂತರ ಬೆಂಬಲ ನೀಡಲಾಗುತ್ತಿದೆ.

ಸುತ್ತುನಿಧಿ:–

ಹೊಸ ಮತ್ತು ಬ್ಯಾಂಕ್ ಸಾಲ ಪಡೆಯದ ಸ್ವ–ಸಹಾಯ ಗುಂಪುಗಳಿಗೆ, ಬ್ಯಾಂಕ್ ಸಾಲ ಪಡೆಯಲು ಅನುವಾಗುವಂತೆ ಮತ್ತು ಆರ್ಥಿಕವಾಗಿ ಸಬಲರಾಗುವಂತೆ ಮಾಡಲು ಅರ್ಹ ಗುಂಪುಗಳನ್ನು ಗುರುತಿಸಿ, ಶ್ರೇಣೀಕರಣ ಮಾಡಿ ಗರಿಷ್ಠ ಒಂದು ಗುಂಪಿಗೆ ಒಟ್ಟು ರೂ.15000/–ಗಳನ್ನು ಅನುದಾನ ರೂಪದಲ್ಲಿ ಒದಗಿಸುವುದು. ರಾಜ್ಯದಲ್ಲಿ 2013–14 ರಿಂದ 2022–23 ವರೆಗೆ 37954 ಸ್ವ–ಸಹಾಯ ಗುಂಪುಗಳಿಗೆ ರೂ.5665.00 ಲಕ್ಷಗಳ ಸುತ್ತು ನಿಧಿಯನ್ನು ನೀಡಲಾಗುತ್ತಿದೆ.

| | |
|---|---|
| | **ಸಮುದಾಯ ಬಂಡವಾಳ ನಿಧಿ:-**<br>(ಸಿ.ಐ.ಎಫ್) ಒಕ್ಕೂಟಗಳ ಸುಸ್ಥಿರತೆಯೊಂದಿಗೆ ಜೀವನೋಪಾಯ ಉದ್ಯೋಗಗಳನ್ನು ಕೈಗೊಳ್ಳುವಲ್ಲಿ ಸ್ವಸಹಾಯ ಗುಂಪಿನ ಮಹಿಳೆಯರಿಗೆ ಅನುಕೂಲ ಒದಗಿಸುವ ದೃಷ್ಟಿಯಿಂದ ಸಮುದಾಯ ಬಂಡವಾಳ ನಿಧಿಯನ್ನು ನೀಡಲಾಗುವುದು. ಸಮುದಾಯ ಬಂಡವಾಳ ನಿಧಿಯನ್ನು ರೂ.1.50ಲಕ್ಷಗಳನ್ನು ನಿಯಮಾನುಸಾರ ಜೀವನೋಪಾಯ ಉದ್ಯೋಗಗಳನ್ನು ಕೈಗೊಳ್ಳಲು ಗುಂಪುಗಳಿಗೆ ಕಡಿಮೆ ಬಡ್ಡಿದರದಲ್ಲಿ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟದ ಮೂಲಕ ನೀಡಲಾಗುತ್ತಿದೆ. ಒಟ್ಟು 98,493 ಸ್ವ-ಸಹಾಯ ಗುಂಪುಗಳಿಗೆ ರೂ.97909.00 ಲಕ್ಷಗಳಷ್ಟು ಸಮುದಾಯ ಬಂಡವಾಳ ನಿಧಿಯನ್ನು ಒಕ್ಕೂಟಗಳಿಗೆ ನೀಡಲಾಗಿದ್ದು ಈ ಮೊತ್ತವು ಗುಂಪುಗಳಲ್ಲಿ ನಿರಂತರವಾಗಿ ಲಭ್ಯವಿರುತ್ತದೆ. ಸ್ವ-ಸಹಾಯ ಗುಂಪುಗಳ ಬ್ಯಾಂಕ್ ಲಿಂಕೇಜ್ ಮೂಲಕ ಜೀವನೋಪಾಯ ಉದ್ಯೋಗ ಕೈಗೊಳ್ಳಲು ಸಾಲ-ಸೌಲಭ್ಯ ಒದಗಿಸಲಾಗುತ್ತಿದೆ.<br><br>**ರಾಷ್ಟ್ರೀಯ ಗ್ರಾಮೀಣ ಆರ್ಥಿಕ ಪರಿವರ್ತನೆ ಯೋಜನೆ:-**<br>ರಾಜ್ಯದ 3 ಜಿಲ್ಲೆಗಳ ಆಯ್ದ 15 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, 13 ಒನ್‌ಸ್ಟಾಪ್ ಸೆಂಟರ್‌ಗಳ ಮೂಲಕ ಪ್ರಮುಖವಾಗಿ ಮಹಿಳೆಯರನ್ನು ಉದ್ದಿಮೆದಾರರನ್ನಾಗಿ ಬೆಳೆಸುವಲ್ಲಿ ಸೂಕ್ತ ತರಬೇತಿ, ಕೌಶಲ್ಯಗಳ ತಾಂತ್ರಿಕ ಬೆಂಬಲ ಮತ್ತು ಮಾರುಕಟ್ಟೆ ವ್ಯವಸ್ಥೆ ಮತ್ತು ಸಮುದಾಯ ಉದ್ಯಮ ನಿಧಿಗಳನ್ನು ಅರ್ಹತೆಯಾನುಸಾರ ಕಲ್ಪಿಸಲಾಗುತ್ತಿದೆ. 03 ಜಿಲ್ಲೆಗಳಡಿ 2017 ಮಹಿಳೆಯರನ್ನು ಉದ್ಯಮದಾರರನ್ನಾಗಿ ಅಭಿವೃದ್ಧಿ ಪಥದತ್ತ ಬೆಳೆಸಲಾಗುತ್ತಿದೆ.<br><br>**ದೀನ್ ದಯಾಳ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೊಜನೆಯ ಡಿಡಿಯುಜಿಕೆವೈ:-**<br>ರಾಜ್ಯದಲ್ಲಿ ಈ ಕಾರ್ಯಕ್ರಮವನ್ನು 13 ಯೋಜನಾ ಅನುಷ್ಠಾನ ಸಂಸ್ಥೆಗಳ ಮೂಲಕ 17 ತರಬೇತಿ ಕೇಂದ್ರಗಳು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ಗ್ರಾಮೀಣ ಯುವಕ ಯುವತಿಯರಿಗೆ ವೇತನ ಆಧಾರಿತ ವಿವಿಧ ಕೌಶಲ್ಯ ತರಬೇತಿಗಳನ್ನು ಒದಗಿಸಿ ಉದ್ಯೋಗ ಹೊಂದಲು ಬೆಂಬಲಿಸಲಾಗುತ್ತಿದ್ದು, ರಾಜ್ಯದಲ್ಲಿ 50127 ಅಭ್ಯರ್ಥಿಗಳಿಗೆ ವಿವಿಧ ತರಬೇತಿಗಳನ್ನು ಒದಗಿಸಿ 25840 ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ.<br><br>**ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ:-**<br>ಕಾರ್ಯಕ್ರಮದಡಿ ರಾಜ್ಯದ 31 ತರಬೇತಿ ಸಂಸ್ಥೆಗಳಡಿ ಗ್ರಾಮೀಣ ಯುವಕ ಯುವತಿಯರಿಗೆ ಸ್ವ-ಉದ್ಯೋಗ ಆಧಾರಿತ ತರಬೇತಿಗಳನ್ನು ನೀಡಿ ಸ್ವ-ಉದ್ಯೋಗ ಒದಗಿಸಲಾಗುತ್ತಿದೆ. ಅಭ್ಯರ್ಥಿಗಳ ಆಯ್ಕೆಯಾನುಸಾರ ಉಚಿತ ತರಬೇತಿ ನೀಡಲಾಗಿದ್ದು, ಒಟ್ಟು 347646 ಅಭ್ಯರ್ಥಿಗಳಿಗೆ 290806 ಬಡತನ ರೇಖೆಯ ಕುಟುಂಬಗಳ ಅಭ್ಯರ್ಥಿಗಳು ಪ್ರಯೋಜನ ಪಡೆದಿರುತ್ತಾರೆ. |
| (ಆ) ಇತ್ತೀಚೆಗೆ ನಿರುದ್ಯೋಗ ನಿವಾರಣೆ ಮಾಡುವ ನಿಟ್ಟಿನಲ್ಲಿ ಕೌಶಲ್ಯಾಭಿವೃದ್ಧಿ ಆಧರಿಸಿ ಸರ್ಕಾರ ನಡೆಸಿದ ಉದ್ಯೋಗ ಮೇಳಗಳ ಗುರಿ ಮತ್ತು ಸಾಧಿಸಿದ ಪ್ರಗತಿ ಏನು; (ಮಾಹಿತಿ ನೀಡುವುದು) | **ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೆ.ಎಸ್.ಡಿ.ಸಿ)**<br>ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದಿಂದ ಉಚಿತ ಕೌಶಲ್ಯಾಧಾರಿತ ತರಬೇತಿಯೊಂದಿಗೆ ನಿರುದ್ಯೋಗ ನಿವಾರಣೆ ಮಾಡುವ ನಿಟ್ಟಿನಲ್ಲಿ 2021-22ನೇ ಸಾಲಿನಲ್ಲಿ 57 ಉದ್ಯೋಗ ಮೇಳಗಳನ್ನು ನಡೆಸಲಾಗಿದ್ದು, ಅದರಲ್ಲಿ 17461 ಅಭ್ಯರ್ಥಿಗಳು ಉದ್ಯೋಗಾವಕಾಶ ಪಡೆಯಲು ಆಯ್ಕೆಗೊಂಡಿರುತ್ತಾರೆ. 2022-23ನೇ ಸಾಲಿನಲ್ಲಿ (ನವೆಂಬರ್-2022ರ ಅಂತ್ಯಕ್ಕೆ) ಒಟ್ಟು 09 ಉದ್ಯೋಗ ಮೇಳಗಳನ್ನು ನಡೆಸಲಾಗಿದ್ದು, 4080 ಅಭ್ಯರ್ಥಿಗಳು ಉದ್ಯೋಗಾವಕಾಶ ಪಡೆಯಲು ಆಯ್ಕೆಗೊಂಡಿರುತ್ತಾರೆ.<br><br>**ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಎನ್.ಆರ್.ಎಲ್.ಎಂ)**<br>ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯ ದೀನ್‌ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯ-ಡಿಡಿಯುಜಿಕೆವೈ ಕಾರ್ಯಕ್ರಮದಡಿ ಇತ್ತೀಚಿಗೆ ಜಿಲ್ಲೆಗಳಲ್ಲಿ ಸಂಘಟಿಸಿದ ಉದ್ಯೋಗ ಮೇಳದ ಮಾಹಿತಿ ಅನುಬಂಧ-1ರಲ್ಲಿ ನೀಡಲಾಗಿದೆ. |

| | |
|---|---|
| (ಇ) ಕೌಶಲ್ಯಾಭಿವೃದ್ಧಿ ಇಲಾಖೆ ನಗರ ಪ್ರದೇಶಗಳಿಗೆ ಹೆಚ್ಚು ಆದ್ಯತೆ ನೀಡುತ್ತಿದ್ದು, ಗ್ರಾಮಾಂತರ ಪ್ರದೇಶದ ಯುವಕರಿಗೆ ಈ ಯೋಜನೆಗಳು ತಲುಪುವಂತಾಗಲು ಸರ್ಕಾರ ಹಮ್ಮಿಕೊಂಡಿರುವ ಕಾರ್ಯಯೋಜನೆಗಳೇನು? | **ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೆ.ಎಸ್.ಡಿ.ಸಿ)**<br>ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮವು ಆಸಕ್ತ ಉದ್ಯೋಗಾಂಕ್ಷಿ ಹಾಗೂ ಉದ್ಯೋಗದಾತರುಗಳನ್ನು ಒಂದೇ ವೇದಿಕೆಯಡಿ ತರಲು Skill Connect (ಕೌಶಲ್ಯ ಸಂಪರ್ಕ) ಪೋರ್ಟಲ್ ಅನ್ನು ಸೃಷ್ಟಿಸಿದ್ದು,. ರಾಜ್ಯದ ಯುವಕ-ಯುವತಿಯರುಗಳನ್ನು ಈ ವೇದಿಕೆಯಡಿ ತಂದು ಕೌಶಲ್ಯ ತರಬೇತಿ ಮತ್ತು ಉದ್ಯಮಶೀಲತೆಯ ತರಬೇತಿ ನೀಡಲು ಮತ್ತು ಉದ್ಯೋಗಾವಕಾಶ, ಕಲ್ಪಿಸಲು ಈಗಾಗಲೇ ರಾಮನಗರ ಜಿಲ್ಲೆಯಲ್ಲಿ ಪೈಲಟ್ ಆಧಾರದ ಮೇರೆಗೆ ಸ್ಕಿಲ್ ಹಬ್(Skill Hub) ಸ್ಥಾಪಿಸಲಾಗಿದೆ. ಇದೇ ರೀತಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಸಹ ಸ್ಕಿಲ್ ಹಬ್‌ಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ. ಅಲ್ಲದೇ ಕೌಶಲ್ಯಾಭಿವೃದ್ಧಿ ನಿಗಮದ ವತಿಯಿಂದ Skill on Wheels ಯೋಜನೆಯನ್ನು ಪೈಲಟ್ ಆಧಾರದ ಮೇರೆಗೆ ಪ್ರಾರಂಭಿಸಲಾಗುತ್ತಿದ್ದು, ದೂರದ ಹಳ್ಳಿಗಾಡಿನ (ಜನನಿಬಿಡ) ಹಾಗೂ ಗುಡ್ಡಗಾಡು ಪ್ರದೇಶದಲ್ಲಿ ವಾಸಿಸುವ ಯುವ ಜನತೆಗೆ ಹಾಗೂ ಇತರೆ ಪ್ರದೇಶಗಳಲ್ಲಿನ ಯುವ ಜನತೆಗೆ ಸ್ಥಳದಲ್ಲಿಯೇ ಕೌಶಲ್ಯಾಧಾರಿತ ತರಬೇತಿ ನೀಡುವ ಮಹತ್ವಾಕಾಂಕ್ಷೆಯನ್ನು ಹೊಂದಿರುತ್ತದೆ.<br><br>**ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಎನ್.ಆರ್.ಎಲ್.ಎಂ)**<br>ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆಯಡಿ ಗ್ರಾಮೀಣ ಸ್ವಸಹಾಯ ಗುಂಪಿನ ಮಹಿಳೆಯರಿಗೆ ಒಂದಕ್ಕಿಂತ ಹೆಚ್ಚು ಜೀವನೋಪಾಯ ಚಟುವಟಿಕೆ ತೊಡಗಿಸಿಕೊಳ್ಳುವುದಕ್ಕೆ ಸಮುದಾಯ ಬಂಡವಾಳ ನಿಧಿ, ಸುತ್ತು ನಿಧಿ, ಬ್ಯಾಂಕ್ ಸಾಲ ಸೌಲಭ್ಯ, ಕಿರು ಬಂಡವಾಳ ಉದ್ಯಮಗಳನ್ನು ಕೈಗೊಳ್ಳಲು ಸೂಕ್ತ ತರಬೇತಿ ಮತ್ತು ಲಿಂಕೇಜ್, ನರೇಗಾ ಯೋಜನೆ ಸೇರಿದಂತೆ ಇತರೆ ಇಲಾಖೆಗಳಾದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಕೃಷಿ, ತೋಟಗಾರಿಕೆ ಇತರ ಅವಶ್ಯಕ ಇಲಾಖೆಗಳೊಂದಿಗೆ ಒಗ್ಗೂಡಿಸುವಿಕೆ ಕಾರ್ಯಕ್ರಮದಡಿ ನಿರಂತರವಾಗಿ ಸೌಲಭ್ಯ ಒದಗಿಸಲಾಗುತ್ತಿದೆ.<br><br>ಸ್ವ-ಸಹಾಯ ಗುಂಪಿನ ಮಹಿಳೆಯರು ಉತ್ಪಾದಿಸುವ ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆಗಾಗಿ ಮಾಸಿಕ ಸಂತೆ, ಸರಸ್ ಮೇಳ ಮತ್ತು ಆನ್ ಲೈನ್ ಮಾರುಕಟ್ಟೆಗಳಾದ ಅಮೇಜಾನ್, ಕಲ್ಚರ್‌ಸ್ಟ್ರೀಟ್ ಮುಂತಾದ ವೇದಿಕೆಗಳಡಿ ವ್ಯವಸ್ಥೆಗಳನ್ನು ಒದಗಿಸಲಾಗುತ್ತಿದೆ.<br><br>ಪ್ರಮುಖವಾಗಿ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟದಡಿ ಕಾರ್ಯನಿರ್ವಹಿಸುತ್ತಿರುವ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳು, ಮುಖ್ಯ ಪುಸ್ತಕ ಬರಹಗಾರರು, ಕೃಷಿ, ಪಶು, ಉದ್ಯೋಗ, ವನ ಸಖಿಯರು ಮನೆ ಮನೆಗಳ ಸಮೀಕ್ಷೆಗಳನ್ನು ಕೈಗೊಂಡು ಒಂದು ಕುಟುಂಬದಿಂದ ಕನಿಷ್ಠ ಒಬ್ಬರು ಗ್ರಾಮಾಂತರ ಮಹಿಳೆಯರು ಸ್ವಸಹಾಯ ಗುಂಪಿನಡಿ ದೊರೆಯುವ ಸೌಲಭ್ಯಗಳು ಮತ್ತು ಅವರ ಕುಟುಂಬದ ಯುವಕ/ಯುವತಿಯರ/ ಸದಸ್ಯರುಗಳಿಗೆ ಅರ್ಹತೆಯ ಅನುಸಾರ ಡಿಡಿಯು-ಜಿಕೆವೈ(DDUGKY), ಆರ್‌ಸೆಟಿ (RSETI) ಮುಂತಾದ ಕೌಶಲ್ಯ ತರಬೇತಿಗಳಿಗೆ ನಿಯೋಜನೆಗೊಳಿಸಿ ಉದ್ಯೋಗ/ಸ್ವ-ಉದ್ಯೋಗ ಕಲ್ಪಿಸಲಾಗುತ್ತಿದೆ.<br><br>ಒಟ್ಟಾರೆ ಪ್ರತಿಯೊಂದು ಕುಟುಂಬವು ಜೀವನೋಪಾಯ ಉದ್ಯೋಗಗಳ ಮೂಲಕ ವಾರ್ಷಿಕ ಕನಿಷ್ಠ ಒಂದು ಲಕ್ಷ ರೂ.ಗಳನ್ನು ಸಂಪಾದಿಸುವ ಸಾಮರ್ಥ್ಯ ಮತ್ತು ಅವಕಾಶಗಳನ್ನು ಕಲ್ಪಿಸಿ ಗ್ರಾಮೀಣ ಬಡ ಕುಟುಂಬಗಳ ಆರ್ಥಿಕ ಅಭಿವೃದ್ಧಿ, ಮಹಿಳಾ ಸ್ವಾವಲಂಬನೆ ಹಾಗೂ ಜೀವನಮಟ್ಟ ಸುಧಾರಣೆಗೆ ಸಮಗ್ರ ಕ್ರಿಯಾ ಯೋಜನೆಗಳ ಮೂಲಕ ಕ್ರಮ ಕೈಗೊಳ್ಳಲಾಗುತ್ತಿದೆ. |

| | |
|---|---|
| | **ಸಿಡಾಕ್**<br>ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್) ದಿಂದ ನಗರ ಪ್ರದೇಶ ಹಾಗೂ ಗ್ರಾಮಾಂತರ ಪ್ರದೇಶದ ಯುವಕರಿಗೆ ಆದ್ಯತೆ ನೀಡಲಾಗುವುದು.<br><br>ಗ್ರಾಮಾಂತರ ಪ್ರದೇಶದ ಯುವಕರಿಗೆ ಯೋಜನೆಗಳು ತಲುಪುವಂತಾಗಲು ತಾಲ್ಲೂಕು ಮಟ್ಟದಲ್ಲಿ ಹಾಗೂ ಗ್ರಾಮ ಮಟ್ಟದಲ್ಲಿ ಉದ್ಯಮಶೀಲತಾ ಪ್ರೇರಣಾ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. |

**ಸಂಖ್ಯೆ: ಕೌಉಜೀಇ 26 ಕೌಗುಪ್ರ 2022**

(ಡಾ॥ ಸಿ.ಎನ್. ಅಶ್ವಥ್‌ನಾರಾಯಣ)
ಉನ್ನತ ಶಿಕ್ಷಣ, ಐಟಿ-ಬಿಟಿ ವಿಜ್ಞಾನ ಮತ್ತು
ತಂತ್ರಜ್ಞಾನ, ವಿದ್ಯುನ್ಮಾನ ಮತ್ತು
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು.

<u>ಅನುಬಂಧ-1</u>

ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯ ದೀನ್ ದಯಾಳ ಉಪಾದ್ಯಾಯ-ಗ್ರಾಮೀಣ ಕೌಶಲ್ಯ ಯೊಜನೆಯ(ಡಿಡಿಯುಜಿಕೆವೈ) ಕಾರ್ಯಕ್ರಮದಡಿ ಇತ್ತೀಚಿಗೆ ಜಿಲ್ಲೆಗಳಲ್ಲಿ ಸಂಘಟಿಸಿದ ಉದ್ಯೋಗ ಮೇಳದ ವಿವರ ಈ ಕೆಳಗಿನಂತಿದೆ;

| ಕ್ರ.ಸಂ | ಜಿಲ್ಲೆ ಹೆಸರು | ಉದ್ಯೋಗ ಮೇಳ ನಡೆದ ದಿನಾಂಕ | ಭಾಗವಹಿಸಿದ ಕಂಪನಿಗಳ ಸಂಖ್ಯೆ | ಸಂದರ್ಶನಕ್ಕೆ ಹಾಜರಾದ ಅಭ್ಯರ್ಥಿಗಳ ಸಂಖ್ಯೆ | ತಾತ್ಕಲಿಕವಾಗಿ ಆಯ್ಕೆಯಾದವರ ಅಭ್ಯರ್ಥಿಗಳ ಸಂಖ್ಯೆ | ಉದ್ಯೋಗ ಮೇಳದ ಮೂಲಕ ಉದ್ಯೋಗ ದೊರಕಿಸಿಕೊಂಡ ಅಭ್ಯರ್ಥಿಗಳ ಸಂಖ್ಯೆ |
|---|---|---|---|---|---|---|
| 1 | ಯಾದಗಿರಿ | 21.11.2021 | 13 | 734 | 400 | 0 |
| 2 | ದಾವಣಗೆರೆ | 28.11.2021 | 26 | 1396 | 768 | 307 |
| 3 | ಶಿವಮೊಗ್ಗ | 21.12.2021 | 25 | 1675 | 1675 | 0 |
| 4 | ಕಲಬುರಗಿ | 23.12.2021 | 19 | 1249 | 250 | 115 |
| 5 | ಚಾಮರಾಜನಗರ | 23.12.2021 | 25 | 2829 | 1341 | 916 |
| 6 | ಬೆಳಗಾವಿ | 23.12.2021 | 18 | 1210 | 980 | 0 |
| 7 | ಚಿಕ್ಕಬಳ್ಳಾಪುರ | 24.12.2021 | 5 | 71 | 41 | 34 |
| 8 | ಬಳ್ಳಾರಿ | 29.12.2021 | 22 | 2316 | 602 | 545 |
| 9 | ಉತ್ತರಕನ್ನಡ | 29.12.2021 | 7 | 261 | 186 | 31 |
| 10 | ಉಡುಪಿ | 03.01.2022 | 19 | 947 | 400 | 0 |
| 11 | ಕೊಪ್ಪಳ | 21.03.2022 | 56 | 696 | 56 | 0 |
| 12 | ಮಂಡ್ಯ | 19.03.2022 | 80 | 4210 | 2500 | 1182 |
| 13 | ವಿಜಯಪುರ | 04.03.2022 | 48 | 1024 | 816 | 816 |
| 14 | ಬೆಂಗಳೂರು ನಗರ | 27.03.2022 | 72 | 2069 | 664 | 347 |
| 15 | ಕೊಡಗು | 29.04.2022 | 15 | 130 | 21 | 12 |
| | | | **450** | **20817** | **10700** | **4305** |

- 2022-23ನೇ ಸಾಲಿನಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ ಒಂದು ಉದ್ಯೋಗ ಮೇಳವನ್ನು ಕೈಗೊಳ್ಳುವ ಗುರಿ ಹೊಂದಲಾಗಿದ್ದು, ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು.